# ಸೆರೆಮನೆಯ ವರದಾನ

ಮೂಲ ಲೇಖಕರು: ವಿಲ್ಲೀ ಬಿ. ಬ್ಲ್ಯಾಕ್‌ಮನ್

ಅನುವಾದ: ಎನ್. ಜಿ. ಪ್ರಭುಪ್ರಸಾದ್

**[ಈ ಲೇಖನದ ಮೂಲಲೇಖಕರು ೧೯೮೧ ರಿಂದ, ಅಮೇರಿಕ ದೇಶದ ಮಿಸ್ಸೌರಿ ರಾಜ್ಯದ ಕಾರಾಗೃಹವೊಂದರಲ್ಲಿ ೩೬ ವರ್ಷಗಳ ಕಾಲದ ಸೆರೆವಾಸವನ್ನು ಅನುಭವಿಸುತ್ತಿದ್ದಾರೆ. ವೇದಾಂತವು ಅವರ ಬಾಳಿನಲ್ಲಿ ಸಕಾರಾತ್ಮಕ ಪರಿವರ್ತನೆಯನ್ನು ತಂದಿತು. ಅವರ ದೃಷ್ಟಿಕೋನವನ್ನು ಹೆಚ್ಚು ವ್ಯಾಪಕವನ್ನಾಗಿ ಮಾಡಿತು. ಈ ಅಪೂರ್ವ ಮಾನಸಿಕ ಸಾಹಸಗಾಥೆಯನ್ನು ಅವರು ಇಲ್ಲಿ ದಾಖಲಿಸಿದ್ದಾರೆ. ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'ವೇದಾಂತ ಕೇಸರಿ' ಯ ಸೆಪ್ಟೆಂಬರ್ ೨೦೦೭ ರ ಸಂಚಿಕೆಯಲ್ಲಿ ಪ್ರಕಟವಾದ ಆಂಗ್ಲ ಲೇಖನದ ಅನುವಾದವನ್ನು ಶೃಂಗೇರಿಯ ಯುವ ಲೇಖಕ ಎನ್. ಜಿ. ಪ್ರಭುಪ್ರಸಾದ್ ಅವರು ಮಾಡಿಕೊಟ್ಟಿದ್ದಾರೆ.]**

**ನ**ನ್ನ ಆತ್ಮಜಾಗೃತಿಯು, ನನಗೊದಗಿ ಬಂದ ಕಾರಾಗೃಹವಾಸದ ಪರಿಣಾಮವಾಗಿ ಉಂಟಾಯಿತು ಎಂದು ಹೇಳಲಿಚ್ಛಿಸುತ್ತೇನೆ. ಕೆಲವರು ಸೆರೆವಾಸವನ್ನು ಶಾಪವೆಂದು ಪರಿಗಣಿಸಬಹುದೇನೋ; ಆದರೆ ನನ್ನ ಮಟ್ಟಿಗೆ ಅದು ವರವಾಗಿ ಪರಿಣಮಿಸಿದೆ. ಸತ್ಯವಾಗಿ ಹೇಳುವುದೆಂದರೆ, ಸೆರೆಮನೆಯೇ ನಾನು ದೇವರನ್ನು ಕಂಡುಕೊಂಡ ಜಾಗ. ಅದು ನನಗೆ ನನ್ನ ಶ್ರದ್ಧೆ ಹಾಗೂ ದೈವಭಕ್ತಿಯನ್ನು ಹೊಂದುವ ಅಂತರ್ದೃಷ್ಟಿಗೆ ಪೂರಕವಾದ, ಉತ್ತಮ ಸನ್ನಿವೇಶಗಳನ್ನು ಒದಗಿಸಿಕೊಟ್ಟಿದೆ.

ನನ್ನನ್ನು ತಪ್ಪಾಗಿ ತಿಳಿಯಬೇಡಿ. ಜೈಲಿನ ಸುದೀರ್ಘ ಜೀವನ ಸುಲಭವಾದುದೇನಲ್ಲ. ವಿಶೇಷವಾಗಿ ಇದು ಮಧ್ಯಮ ಹಾಗೂ ಅತ್ಯಧಿಕ ಸುರಕ್ಷತೆಯಿರುವ ಜೈಲುಗಳಿಗೆ (maximum and medium security) ಅನ್ವಯಿಸುತ್ತದೆ. ನಾವು ದಿನನಿತ್ಯವೂ ಮಾನಸಿಕವಾಗಿ ಕ್ಷೋಭೆಗೊಳಗಾದ ಖೈದಿಗಳಿಂದಲೂ ಹಾಗೂ ಪರಿವೀಕ್ಷಣಾಧಿಕಾರಿಗಳಿಂದಲೂ ಕೆಟ್ಟ ಬೈಗುಳಗಳನ್ನು ಎದುರಿಸುತ್ತೇವೆ. ನಮ್ಮ ಬೆನ್ನಲ್ಲಿ ಕಣ್ಣುಗಳು ಇಲ್ಲ ತಾನೆ, ಆದ್ದರಿಂದ ನಾವು ಯಾವ ಹುಚ್ಚು ಮನಸ್ಸಿನ ಖೈದಿ ಅಥವಾ ಅಧಿಕಾರಿಯ ಕೆಂಗಣ್ಣಿಗೆ ಗುರಿಯಾಗಿ ತೊಂದರೆಗೊಳಗಾಗುವೆವು ಎಂಬುದರ ಅರಿವೂ ನಮಗಾಗುವುದಿಲ್ಲ. ಹೀಗಾಗಿ ಇಂಥ ಪರಿಸ್ಥಿತಿಯಲ್ಲಿ ನನ್ನ ಮನಸ್ಸಿನ ಸ್ತಿಮಿತವನ್ನು ಕಾಪಾಡುವ ಮನಃಶಾಂತಿಯನ್ನು ಬೆಳೆಸಿಕೊಳ್ಳುವುದು ಕಷ್ಟ ಎಂಬುದನ್ನು ನಾನು ಬಹುಬೇಗ ಕಂಡುಕೊಂಡೆನು.

ಸೆರೆವಾಸದ ಕ್ರೂರ ಪರಿಸ್ಥಿತಿಗಳು ಕೊನೆಗೆ ನನ್ನನ್ನು ಉಪಶಮನಕ್ಕಾಗಿ ಒಂದು ಮಹಾಶಕ್ತಿಯೆಡೆಗೆ ದೃಷ್ಟಿ ಹರಿಸುವಂತೆ ಮಾಡಿದವು. ನನ್ನನ್ನು ಸದಾ ಆವರಿಸಿಕೊಂಡಿರುವ ಈ ಹುಚ್ಚಿನ ವಾತಾವರಣದಲ್ಲಿ ಕಳೆದುಹೋಗದಿರಲು ಭಗವಂತನಿಗಾಗಿ ಅಳುವುದೊಂದೇ ದಾರಿ ಎನ್ನುವುದನ್ನು ತಿಳಿದುಕೊಳ್ಳುವಂತೆ ಮಾಡಿದ್ದು ಇದೇ. ಇದರಿಂದ ಮಾತ್ರ ನಾನು ಮನಸ್ಸಿಗೆ ಶಾಂತಿಯನ್ನು ಹಾಗೂ ಜಂಜಾಟದಿಂದ ವಿಮೋಚನೆಯನ್ನು ಪಡೆಯಲು ಸಾಧ್ಯ ಎಂಬುದನ್ನು ಕಂಡುಕೊಂಡೆನು. ನನ್ನ ಈ ಧ್ಯೇಯದ ಸಾಧನೆಗಾಗಿ ಮೊದಲಿಗೆ ಪ್ರಾರ್ಥನೆ ಮತ್ತು ಬೈಬಲ್ ಅಧ್ಯಯನವನ್ನು ಪ್ರಾರಂಭಿಸಿ ತನ್ಮೂಲಕ ಮನಃಶಾಂತಿಗಾಗಿ ಭಗವಂತನೊಡನೆ ಸಂಯೋಗವನ್ನು ಹೊಂದುವ ಮಾರ್ಗದ ಹುಡುಕಾಟದಲ್ಲಿದ್ದೆ. ಪ್ರಾರಂಭದಲ್ಲಿ ಕೆಲವೊಮ್ಮೆ ನನ್ನಲ್ಲಿ ಕಂಡುಬಂದ ಪರಿವರ್ತನೆಗಳು ಅತೀ ಸಣ್ಣದಾದರೂ, ನಾನು ಈ ಹಾದಿಯನ್ನು ಬಿಡದೇ ಸಾಧನೆಯನ್ನು ಮುಂದುವರಿಸಿದೆ.

ನಾನು ಜೈಲಿನಲ್ಲಿ ಅನೇಕ ರೀತಿ–ರಿವಾಜುಗಳನ್ನು ಅನುಸರಿಸಬೇಕಿತ್ತು. ಅವುಗಳು ಸುರಕ್ಷಿತತೆ, ಭದ್ರತೆ ಹಾಗೂ ಶಿಸ್ತನ್ನು ಕಾಪಾಡಲು ರೂಪಿಸಲ್ಪಟ್ಟವುಗಳಾಗಿದ್ದವು. ಈ ನಿಯಮಗಳು ಖೈದಿಗಳು ಹಾಗೂ ಅಧಿಕಾರಿಗಳಿಗೆ ಸಮಾನವಾಗಿ ಅನ್ವಯಿಸುತ್ತಿದ್ದವು. ಆದರೆ ಅಧಿಕಾರಿಗಳು ನಿಯಮಗಳನ್ನು ಗೌರವಿಸುವುದಾಗಲಿ, ಪಾಲಿಸುವುದಾಗಲಿ ಮಾಡುತ್ತಿಲ್ಲವೆಂಬುದು ನನಗೆ ಶೀಘ್ರದಲ್ಲಿಯೇ ಅರಿವಾಯಿತು. ಉದಾಹರಣೆಗೆ, ಅವರು 'ಸೆರೆವಾಸಿಗಳಿಗೆ ಬಯ್ಯಬಾರದು' ಎಂಬ ನಿಯಮವನ್ನೆಂದೂ ಲೆಕ್ಕಿಸುತ್ತಿರಲಿಲ್ಲ. ಆದರೆ ಕೈದಿಗಳಿಗೆ ರೂಪಿಸಲ್ಪಟ್ಟಿರುವ ನಿಯಮಗಳನ್ನು ನನ್ನ ಶಕ್ತಿಮೀರಿ ಪಾಲಿಸುವುದೊಳಿತು ಎಂಬುದನ್ನು ನಾನು ಕಂಡುಕೊಂಡೆನು. ಹಾಗೆಯೇ ನನ್ನೊಳಗೆ ನೆಲೆಸಿರುವ ಪರಮಾತ್ಮನಲ್ಲಿ ಹೆಚ್ಚಾಗಿ ವಿಶ್ವಾಸವಿರಿಸಲು ಪ್ರಾರಂಭಿಸಿ, ಮಾರ್ಗದರ್ಶನ ಹಾಗೂ ಇಲ್ಲಿ ಬದುಕುಳಿಯಲು ಬೇಕಾದ ಶಕ್ತಿಯನ್ನು ನೀಡೆಂದು ಆತನಲ್ಲಿ ಮೊರೆಯಿಡಲಾರಂಭಿಸಿದೆನು.

ಕಾಲಕ್ರಮೇಣ ಸತತ ಅಭ್ಯಾಸದಿಂದಾಗಿ ಸೆರೆಯಲ್ಲಿ ನನಗೆ ವಿಧಿಸಲ್ಪಟ್ಟಿರುವ ನಿಯಮಗಳು ಕೇವಲ ಜೈಲಿನಲ್ಲಿ ನನ್ನ ಉಳಿವಿಗಾಗಿ ಮಾತ್ರ ಇರುವ ನಿಯಮಗಳಾಗಿರದೇ, ಅವು ಜೀವನದಲ್ಲಿ ಪ್ರತಿಯೊಬ್ಬರೂ ಅನುಸರಿಸಬೇಕಾದ ವಿಶ್ವವ್ಯಾಪಿ ಆಧ್ಯಾತ್ಮಿಕ ತತ್ತ್ವಗಳಂತೆ ನನಗೆ ತೋರತೊಡಗಿದವು. ನನ್ನನ್ನು ಇತರರು ಹೇಗೆ ಕಾಣಬೇಕೆಂದು ನಾನು ಬಯಸುವೆನೋ, ಹಾಗೆಯೇ ಪರರನ್ನು ಕೂಡ ನಾನು ಆದರಿಸತೊಡಗಿದೆ. ಇದು ನನ್ನ ಸೆರೆಮನೆಯ ಜೀವನವನ್ನು ಮತ್ತಷ್ಟು ಸಹನೀಯಗೊಳಿಸಿತು. ನಮ್ಮ ಮೇಲಧಿಕಾರಿಗಳು ಎಲ್ಲರ ಒಳಿತಿಗೆ ರೂಪಿಸಿದ ರೀತಿ–ನಿಯಮಗಳನ್ನು ಗೌರವಿಸುತ್ತ, ನಾವು ಬೇರೆಯವರಿಂದ ನಿರೀಕ್ಷಿಸುವ ಗೌರವವನ್ನು ಅವರಿಗೂ ನೀಡುವ ಮನೋಭಾವವು ನನ್ನಲ್ಲಿ ದೃಢವಾಗುವಂತೆ ಮಾಡಿತು. ಸೆರೆವಾಸದ ಕಠಿಣ ಪರಿಸ್ಥಿತಿಗಳು ಹಾಗೂ ನಿರಾಶೆಯ ಪ್ರಸಂಗಗಳು ನಿಜವಾಗಿಯೂ ದೇವರಿಗಾಗಿ ಪರಿತಪಿಸುವಂತೆ ಮಾಡಿದವು.

ಹಾಗೆಯೇ ನನ್ನ ಅಜ್ಞಾನವೇ ನನಗೆ ಸೆರೆವಾಸ ಲಭಿಸುವಂತೆ ಮಾಡಿದ್ದು ಎನ್ನುವುದನ್ನು ಕೂಡ ನಾನು ಒಪ್ಪಿಕೊಳ್ಳಲೇಬೇಕು. ದೇವರಿಗಾಗಿನ ನನ್ನ ಹುಡುಕಾಟವು, ಇಂದಿಗೂ ನಾನು ಬಿಡದೇ ಅನುಸರಿಸುತ್ತಿರುವ ವಿಶಿಷ್ಟ ದಿನನಿತ್ಯದ ಆಧ್ಯಾತ್ಮಿಕ ಸಾಧನೆಗೆ ನನ್ನ ಮನಸ್ಸು ಮುಕ್ತವಾಗುವಂತೆ ಮಾಡಿತು. ಈ ಸಾಧನೆಯು ಸೆರೆಮನೆಯ ಚಿಕ್ಕ ಕೊಠಡಿಯಲ್ಲಿ ನಾನು ನಡೆಸುವ ಪ್ರಾರ್ಥನೆ, ಆಧ್ಯಾತ್ಮಿಕ ವಿಚಾರಗಳ ಚಿಂತನೆ ಹಾಗೂ ಮೌನ ಧ್ಯಾನ ಗಳನ್ನೊಳಗೊಂಡಿದೆ. ಹಾಗೂ ನನ್ನಲ್ಲಿರುವ ಉತ್ತಮವಾದುದನ್ನು ಬೇರೆಯವರು ಹೇಗೆ ಗೌರವಿಸಬೇಕೆಂದು ನಾನು ಬಯಸುವೆನೋ, ಅದೇ ವಿಧಾನದಲ್ಲಿ ಇತರರನ್ನು ಆದರಿಸುವುದನ್ನು ಕೂಡ ನನ್ನ ಸಾಧನೆಯು ಒಳಗೊಂಡಿದೆ. ಸೆರೆವಾಸದಲ್ಲಿ ಉಂಟಾಗುವ ಕಠಿಣ ಸಂದರ್ಭಗಳು ಮತ್ತು ಘೋರವಾದ ಕಷ್ಟಗಳ ನಡುವೆಯೂ ನನ್ನೊಳಗೆ ಶಾಂತಿಯನ್ನು ಕಾಪಾಡಿಕೊಳ್ಳಲು ನನ್ನ ಈ ಬಗೆಯ ದಿನಚರಿಯಿಂದ ತುಂಬಾ ಸಹಾಯವಾಯಿತು.

ಮೂಳೆಮಾಂಸಗಳಿಂದ ಕೂಡಿರುವ ದೇಹದಲ್ಲಿರುವ ನಾನು ಪರಿಪೂರ್ಣನೆಂದು ಸಾರುತ್ತಿಲ್ಲ ಹಾಗೂ ಇನ್ನೂ ಅಲ್ಲಲ್ಲಿ ಕೆಲವು ತಪ್ಪು ಆಯ್ಕೆಗಳನ್ನು ಮಾಡುತ್ತಲೇ ಇದ್ದೇನೆ. ಆದರೆ ಮುಖ್ಯವಾಗಿ, ನಾನೀಗ ನನ್ನ ಆಂತರಂಗಿಕ ಸಾಮರ್ಥ್ಯವನ್ನು ಬಳಸಿಕೊಂಡು ಒಳಿತನ್ನು ಗೈಯಲು ಪ್ರಯತ್ನಿಸುತ್ತಿದ್ದೇನೆ; ನಾನೀಗ ಬೆಳಕಿನೆಡೆಗೆ ನಡೆಯಲು ಉದ್ಯುಕ್ತನಾಗಿದ್ದೇನೆ ಹಾಗೂ ನಡೆಯುತ್ತಿದ್ದೇನೆ ಕೂಡಾ. ಪ್ರತಿದಿನವೂ ನನ್ನ ಸಾಧನೆಯಿಂದ ಮತ್ತಷ್ಟು ಉತ್ತಮಗೊಳ್ಳುತ್ತಿದ್ದೇನೆ. ತಮ್ಮ ಒಂದು ಪ್ರವಚನದಲ್ಲಿ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ: "ನಮ್ಮ ಜೀವನದಲ್ಲಿ ನಾವು ಮಾಡಬಾರದಾಗಿತ್ತು ಅಂದುಕೊಳ್ಳುವ ನೂರಾರು ಕೃತ್ಯಗಳನ್ನು ಮಾಡಿದ್ದೇವೆ. ಆದರೆ ಅದೇ ಸಮಯದಲ್ಲಿ ಅವುಗಳೇ ನಮ್ಮ ಗುರುಗಳಾಗಿವೆ. ನನಗೆ ಸಂಬಂಧಿಸಿದಂತೆ, ನಾನು ಸ್ವಲ್ಪ ಒಳಿತನ್ನೂ ಮತ್ತು ಕೆಲವು ಕೆಡುಕನ್ನೂ ಮಾಡಿದ್ದೇನೆ ಎಂದು ಸಂತಸಪಡುತ್ತೇನೆ. ಕೆಲವು ಸರಿಯಾದ ಕೆಲಸಗಳನ್ನು ಮಾಡಿದ್ದಕ್ಕೆ ನನಗೆ ಸಂತಸವಾಗಿರುವಷ್ಟೇ ಕೆಲ ತಪ್ಪುಗಳನ್ನು ಮಾಡಿದ್ದಕ್ಕೂ ನನಗೆ ಸಂತೋಷವೇ. ಏಕೆಂದರೆ, ಅವೆಲ್ಲವೂ ಒಂದು ದೊಡ್ಡ ಪಾಠವನ್ನೇ ನನಗೆ ಕಲಿಸಿವೆ. ನಾನು ಈಗ ಏನಾಗಿದ್ದೇನೋ ಅದೆಲ್ಲವೂ ನಾನು ಮಾಡಿದ ಕೃತ್ಯಗಳ ಮತ್ತು ಆಲೋಚನೆಗಳ ಫಲ. ಪ್ರತಿಯೊಂದು ಕ್ರಿಯೆಯೂ ಮತ್ತು ಯೋಚನೆಯೂ ತಮ್ಮದೇ ಆದ ಪರಿಣಾಮವನ್ನು ಬೀರುತ್ತವೆ ಮತ್ತು ಈ ಪರಿಣಾಮಗಳ ಒಟ್ಟು ಮೊತ್ತವೇ ನನ್ನ ಪರಿಪೂರ್ಣ ಬೆಳವಣಿಗೆಯಾಗಿದೆ." ನನ್ನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದಂತೆ ಸ್ವಾಮೀಜಿಯವರ ಈ ಹೇಳಿಕೆಯನ್ನು ಸಂಪೂರ್ಣವಾಗಿ ನಾನು ಅನುಮೋದಿಸುತ್ತೇನೆ.

ಸ್ವಾಮಿ ವಿವೇಕಾನಂದರು ಯಾವುದೇ ಕರ್ಮವು ಕೇವಲ ಒಳ್ಳೆಯದನ್ನು ಮಾತ್ರ ಒಳಗೊಂಡಿರುವುದಿಲ್ಲ ಎನ್ನುವುದನ್ನು ಬೋಧಿಸಿದ್ದರು. ಎಲ್ಲಾ ಕರ್ಮಗಳಲ್ಲಿಯೂ ಒಳ್ಳೆಯದು ಮತ್ತು ಕೆಟ್ಟವು – ಎರಡೂ ಬೇರೆ ಬೇರೆ ಪ್ರಮಾಣದಲ್ಲಿ ಮಿಳಿತವಾಗಿರುತ್ತವೆ. ಆದ್ದರಿಂದ ಕೆಲವೊಮ್ಮೆ ನಾವು ಪತಿತರಾದಂತೆ ಕಂಡರೂ ನಮ್ಮ ಬಗ್ಗೆ ನಾವು ತೀರಾ ನಿಷ್ಠುರರಾಗಿರಬಾರದೆಂದು ಬಗೆಯುತ್ತೇನೆ. ಆದರೆ ನಾವು ಯಾವಾಗಲೂ ಜಾಗೃತರಾಗಿದ್ದುಕೊಂಡು ಯಾವುದು ಅತ್ಯಂತ ಹೆಚ್ಚಿನ ಒಳಿತನ್ನೂ, ಅತಿ ಕಡಮೆ ಕೆಡುಕನ್ನೂ ಉಂಟು ಮಾಡುವುದೋ, ಅಂತಹ ಕರ್ಮವನ್ನು ಮಾಡುವುದರತ್ತ ಗಮನ ಹರಿಸಬೇಕು. ಸಾಮಾನ್ಯ ಮನುಷ್ಯರಾದ ನಾವ್ಯಾರೂ ಪರಿಪೂರ್ಣರಲ್ಲ.

ಆದಾಗ್ಯೂ, ನಮ್ಮ ಜೀವನವನ್ನು ಅಧ್ಯಾತ್ಮದತ್ತ ಕೊಂಡೊಯ್ಯು ವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಮಾಡುವ ನಾವೇ ಕತ್ತಲಿನ ನಡುವಿನ ಬೆಳಕಾಗುತ್ತೇವೆ. ಈ ಸೆರೆಮನೆಯಲ್ಲಿ ಆಧ್ಯಾತ್ಮಿಕ ಸಾಧನೆಯ ನೈಜ ಪ್ರಯತ್ನದಲ್ಲಿ ತೊಡಗಿದ್ದ ಹಲವರನ್ನು ನಾನು ಭೇಟಿಯಾದೆನು. ದೇವರನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವ ಯಾರದೇ ವಿಚಾರಗಳನ್ನು, ಅವರ ವೈಯಕ್ತಿಕ ನಂಬಿಕೆಗಳೇನೇ ಇರಲಿ, ನಾನು ತಿಳಿಯಲಿಚ್ಛಿಸುತ್ತೇನೆ. ಆದರೆ ನಾವೆಲ್ಲಾ ಒಳಿತು ಮತ್ತು ಕೆಡುಕನ್ನು ಮೀರಿದವರು ಎನ್ನುವುದನ್ನು ಅರಿಯುವವರೆಗೆ ದೇವರಲ್ಲಿ ಸಂಪೂರ್ಣ ಐಕ್ಯಭಾವವನ್ನು ಪಡೆಯಲು ಸಾಧ್ಯವಿಲ್ಲ. ನಮ್ಮೆಲ್ಲರ ಅಸ್ತಿತ್ವದ ತಿರುಳು ಆಧ್ಯಾತ್ಮಿಕ ಪ್ರೀತಿಯೇ ಆಗಿದೆ. ದೇವರು ಪ್ರೇಮಮಯಿ; ನಾವೇ ಒಳಿತು ಮತ್ತು ಕೆಡುಕುಗಳನ್ನು ಸೃಷ್ಟಿಸಿದವರು. ಖಂಡಿತವಾಗಿ ನಾವು ನಮ್ಮ ಮನಸ್ಸಿಗನುಸಾರವಾಗಿ ಅವೆರಡನ್ನೂ ನಮ್ಮ ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು.

ನಮ್ಮ ಅಂತಿಮ ಆಧ್ಯಾತ್ಮಿಕ ಗುರಿಯು ಕೆಡುಕನ್ನು ಪ್ರೀತಿಯಿಂದ ನಿಯಂತ್ರಿಸುವುದಾಗಿದೆ. ಕೆಡುಕನ್ನು ಒಳಿತಿನಿಂದ ಗೆಲ್ಲಬೇಕೆಂಬ ಮಾತನ್ನು ನಾವು ಸಾಮಾನ್ಯವಾಗಿ ಕೇಳುತ್ತಿರುತ್ತೇವೆ. ಅದು ಸಹ ಸರಿಯೇ. ದೇವರು ನಿರ್ವ್ಯಾಜ ಪ್ರೇಮರೂಪನಾಗಿದ್ದಾನೆ. **ಯಾವುದೇ ನಿಬಂಧನೆಗೊಳಪಡದ ಸರಳತೆಯಿಂದ ತನ್ನನ್ನು ತಾನು ಇತರರಿಗೆ ಸಮರ್ಪಿಸಿಕೊಳ್ಳುವುದೇ ಪ್ರೀತಿ**. ನಿಜವಾದ ಪ್ರೀತಿಯು ಕೆಡುಕನ್ನು ಗೆಲ್ಲುತ್ತದೆ ಮತ್ತು ಅಸ್ತಿತ್ವದಲ್ಲಿರುವ ಎಲ್ಲ ಶಕ್ತಿಗಳಿಗಿಂತಲೂ ಪ್ರಮುಖ ಶಕ್ತಿಯಾಗಿದೆ. ನೈತಿಕತೆ ಮತ್ತು ಪರಿಶುದ್ಧತೆಯಿಂದ ಮಾತ್ರ ಈ ಬಗೆಯ ನೈಜ ಪ್ರೇಮಭಾವದಲ್ಲಿ ನಾವು ಬದುಕಬಹುದಾಗಿದೆ.

ನಾನೀಗ ನನ್ನೊಳಗಿರುವ, ಎಲ್ಲೆಡೆಯಲ್ಲೂ ಪ್ರೀತಿಯ ಅನಿರ್ಬಂಧಿತ ಸೆಲೆಯಾಗಿರುವ ಭಗವಂತನ ಅನುಯಾಯಿಯಾಗಿದ್ದೇನೆ. ನಮ್ಮಲ್ಲಿ ಬಹುತೇಕ ಜನರು ಜಗತ್ತಿನ ಮಾಯೆಯ ಪ್ರಭಾವಕ್ಕೊಳಗಾಗಿ, ಯಾವುದೇ ಷರತ್ತಿಲ್ಲದ, ಎಲ್ಲೆಡೆಗೂ ನೀಡಬೇಕಾದ ಪ್ರೀತಿಯ ಆಲೋಚನೆ ಹಾಗೂ ಆಚರಣೆಗಳಿಗೆ ವಿರುದ್ಧವಾಗಿಯೇ ಬದುಕು ತ್ತಿದ್ದಾರೆ. ಪ್ರಪಂಚದ ಎಲ್ಲಾ ಜಾಡ್ಯಗಳಿಗೆ ಇದೇ ಕಾರಣ.

ಈ ಅವ್ಯಾಜ ಪ್ರೀತಿಯನ್ನು ಇತರರಿಗೆ, ಅವರ್‍ಯಾರೇ ಆಗಿರಲಿ ಅಥವಾ ಅವರೇನೇ ಮಾಡಲಿ, ಸಂಪೂರ್ಣವಾಗಿ ನೀಡುವುದಕ್ಕಾಗಿ ಪ್ರಯತ್ನಿಸುವುದೇ ನನ್ನ ಸತತ ಹೋರಾಟವಾಗಿದೆ. ಇದೇ ನನ್ನ ಜೀವನದ ಅತ್ಯುನ್ನತ ಗುರಿ. ಇದು ಭಗವಂತನಿಗೆ ಸಂಪೂರ್ಣ ಸಮರ್ಪಿತವಾಗಿ, ಸತ್ಯಕ್ಕೆ ಮುಡಿಪಾಗಿರುವ ಬಾಳುವೆ ನಡೆಸಿ

ದೇವರ ಹುಡುಕಾಟದಲ್ಲಿ ತೊಡಗಿರುವ ಜೀವನಕ್ಕೆ ಸರಿಸಮವಾಗಿದೆ. ಇದೊಂದೇ ನೈಜ ಸಾಕ್ಷಾತ್ಕಾರವಾಗಿದೆ. ಇದನ್ನು ನಿಮ್ಮ ಶ್ರದ್ಧೆ ಅಥವಾ ತತ್ತ್ವಕ್ಕೆ ಹೊಂದುವಂತೆ ಯಾವುದೇ ಹೆಸರಿನಿಂದ ಕರೆಯಿರಿ, ನಿಮಗೆ ಅನುಕೂಲವಾಗುವಂತಹ ಯಾವುದೇ ಸ್ವರೂಪವನ್ನು ಅದಕ್ಕೆ ಕೊಡಿ, ಆದರೆ ಅದರ ತಿರುಳು ಮಾತ್ರ ವಿಶ್ವನಿಯಮಕ್ಕೆ ಪೂರಕವಾದಂತಹ, ಪರಮಾತ್ಮನಲ್ಲಿ ಸಂಪೂರ್ಣ ಶರಣಾಗತಿಯ ಭಾವವೇ ಆಗಿರುವ, ಸರ್ವವ್ಯಾಪಕವಾದ ನಿರ್ವ್ಯಾಜ ಪ್ರೇಮವೇ ಆಗಿರಬೇಕು.

ನನ್ನನ್ನು ನಾನು ಸಂಪೂರ್ಣ ಮೌನದಲ್ಲಿ, ದಿವ್ಯ ಏಕಾಂತದಲ್ಲಿ ಅನ್ವೇಷಿಸಿಕೊಂಡಾಗ, ನನ್ನೊಳಗೆ ಆಧ್ಯಾತ್ಮಿಕ ಜಾಗೃತಿಯು ಅನಾವರಣವಾಗಲಾರಂಭಿಸಿತು. ನನಗೆ ಇದು ಉಂಟಾದುದು ನನ್ನನ್ನು ಈ ಸೆರೆಮನೆಯಲ್ಲಿ ಏಕಾಂತವಾಸದ ಶಿಕ್ಷೆಗೆ ಗುರಿಮಾಡಿದಾಗ. ಇದೇ ಸಂದರ್ಭದಲ್ಲಿಯೇ ನನ್ನೊಳಗಿರುವ ಪರಮಾತ್ಮನು ಸಂಪೂರ್ಣ ಕತ್ತಲಿನಿಂದ ಬೆಳಕಿನೆಡೆಗೆ ನನ್ನನ್ನು ನಡೆಸಿದುದು. ನಾನಾಗ ಅತೀವ ದುಃಖಿತನಾಗಿದ್ದು ನನಗೆ ಎಲ್ಲಿಯೂ ಸಮಾಧಾನದ ಸ್ಥಿತಿ ಗೋಚರಿಸುತ್ತಿರಲಿಲ್ಲ. ಅತ್ಯಂತ ನಿರಾಸೆಯಿಂದ ಕೂಡಿದ್ದ ನಾನು ನನ್ನ ಕೊನೆಯ ಗಳಿಗೆಯಲ್ಲಿದ್ದಂತೆ ಭಾವಿಸಿದ್ದೆನು. ಕೆಲವೊಮ್ಮೆ ನಾನು ಭರವಸೆಯ ಕೀಲಿಕೈಯ ನಿರೀಕ್ಷೆಯಿಂದ ವಿವಿಧ ಧರ್ಮಗ್ರಂಥಗಳ ಅಧ್ಯಯನದಲ್ಲಿ ನಿರತನಾಗುತ್ತಿದ್ದೆನು. ದೇವರ ಹುಡುಕಾಟದಲ್ಲಿ, ಅಂತರಾತ್ಮನ ಮಾರ್ಗದರ್ಶನದಲ್ಲಿ, ಒಳಿತನ್ನು ಬೋಧಿಸುವ ವಿವಿಧ ಆಧ್ಯಾತ್ಮಿಕ ವಿಚಾರಗಳನ್ನು ಸಂಪಾದಿಸಿ ಟಿಪ್ಪಣಿ ಮಾಡಿಟ್ಟಿದ್ದೆನು.

ನನ್ನ ಏಕಾಂತವಾಸದ ದಿನಗಳಲ್ಲಿ ಮೊದಲ ಬಾರಿಗೆ 'ವೇದಾಂತ' ಎಂಬ ಪದವನ್ನು ನೋಡಿದೆನು. ಯಾರೋ ಕರುಣೆಯಿಂದ 'ಕನ್ಸಾಸ್ ಸಿಟಿ ಸ್ಟಾರ್' ಎಂಬ ಪತ್ರಿಕೆಯ ಪ್ರತಿಯೊಂದನ್ನು ನನ್ನ ಕೋಣೆಯ ಬಾಗಿಲಡಿಯಿಂದ ನನ್ನೆಡೆಗೆ ತೂರಿದರು. ಅದರಲ್ಲಿ ನಾನು ಚರ್ಚುಗಳು ನೇರವಾಗಿ ನೀಡುವ ಜಾಹೀರಾತುಗಳಿರುವ ಧಾರ್ಮಿಕ ವಿಭಾಗದೆಡೆಗೆ ಕಣ್ಣಾಡಿಸಿದೆನು. ಅದರಲ್ಲಿಯೇ ನಾನು ಕನ್ಸಾಸ್ ನಗರದಲ್ಲಿ ತನ್ನ ಸೇವೆ ಸಲ್ಲಿಸುತ್ತಿರುವ 'ವೇದಾಂತ ಸೊಸೈಟಿ'ಯ ಆಹ್ವಾನದ ಜಾಹೀರಾತನ್ನು ಕಂಡೆನು. ನನಗಾಗ 'ವೇದಾಂತ' ಎಂಬ ಪದದ ಬಗ್ಗೆ ಏನೂ ತಿಳಿದಿರದಿದ್ದರೂ ಆ ವಿಳಾಸವನ್ನು ಬರೆದಿಟ್ಟುಕೊಂಡು, ಅದನ್ನು ಏಕಾಂತವಾಸದಿಂದ ಬಿಡುಗಡೆಯಾಗುವವರೆಗೂ ಜತನದಿಂದ ಕಾಪಿಟ್ಟುಕೊಂಡಿದ್ದೆ. ಆಮೇಲೆ ನಾನು ವೇದಾಂತ ಸೊಸೈಟಿಯು ಬೋಧಿಸುವ ಧರ್ಮದ ಬಗ್ಗೆ ಮಾಹಿತಿ ಕೋರಿ ಆ ವಿಳಾಸಕ್ಕೆ ಪತ್ರವನ್ನು ಬರೆದೆನು. ಅದರ ಕಾರ್ಯದರ್ಶಿಯವರಿಂದ ವೇದಾಂತ ಸಾಹಿತ್ಯವನ್ನೂ ತುಂಬ ಸೌಜನ್ಯಯುತವಾದ ಉತ್ತರವನ್ನು ಪಡೆದೆನು. ಇನ್ನೊಂದು ಪ್ರತ್ಯೇಕ ಅಂಚೆಯಲ್ಲಿ ನಮ್ಮ ಸೆರೆಮನೆಯ ಗ್ರಂಥಾಲಯಕ್ಕೆ ವೇದಾಂತ ಸೊಸೈಟಿಯವರು 'Vedanta: Voice of Freedom' [ವೇದಾಂತ : ಸ್ವಾತಂತ್ರ್ಯದ ದನಿ] ಎಂಬ ಪುಸ್ತಕವೂ ಸೇರಿದಂತೆ ಸ್ವಾಮಿ ವಿವೇಕಾನಂದರ ಅನೇಕ ಗ್ರಂಥಗಳನ್ನು ಕಳುಹಿಸಿದರು. ಆಗ ನಾನು ಸ್ವಾಮಿ ವಿವೇಕಾನಂದರ ಉಪದೇಶಗಳು ನನ್ನ ಅಂತರಂಗದ ಅರಿವಿನೊಡನೆ ಸಾಮ್ಯಗೊಂಡಿದ್ದನ್ನು ಕಂಡುಕೊಂಡೆ. ಅದಲ್ಲದೆ, ಪವಿತ್ರ ಬೈಬಲ್ಲಿನಲ್ಲಿರುವ ಜ್ಞಾನದ ಬಗೆಗಿನ ನನ್ನ ತಿಳಿವಳಿಕೆಯು ಆಶ್ಚರ್ಯಕರ ರೀತಿಯಲ್ಲಿ ವಿಸ್ತಾರವಾಯಿತು. ನಾನು ಬ್ಯಾಪ್ಟಿಸ್ಟ್ ಚರ್ಚಿಗೆ ಸೇರಿದವನಾದ್ದರಿಂದ, ಧರ್ಮದೊಂದಿಗೆ ನನ್ನ ಮೊದಲ ಮುಖಾಮುಖಿ ಕ್ರೈಸ್ತಮತದಿಂದಲೇ ಆಗಿತ್ತು. ಆದರೆ ಅದು ಕಲಿಸುವ ಪಾಠಗಳನ್ನು ತುಂಬಾ ನಿಧಾನವಾಗಿ ಈಗ ನಾನು ಕಲಿಯತೊಡಗಿದ್ದೆ.

ಈಗ ನಾನು ವೇದಾಂತದ ಪರಿಚಯಕ್ಕೊಳಗಾಗಿ ಅನೇಕ ವರ್ಷಗಳೇ ಸಂದಿವೆ. ಸ್ವಾಮಿ ವಿವೇಕಾನಂದರು ಮತ್ತು ಕೆಲವು ವೇದಾಂತದ ಮಹಾತ್ಮರ ಪುಸ್ತಕಗಳ ಓದಿನಿಂದ ನನ್ನ ಅಂತರಂಗದ ಅದ್ಭುತ ಪ್ರಪಂಚವು ಅನಾವರಣಗೊಂಡಿದೆ, ಹಾಗೂ, ಬಹುವಾಗಿ ವಿಸ್ತಾರಗೊಂಡಿದೆ ಕೂಡ. ಪ್ರಪಂಚದಲ್ಲಿರುವ ವಿವಿಧ ಧರ್ಮಗಳ ಸಾರವು ಒಂದೇ ಸತ್ಯವನ್ನು ವಿವಿಧ ಮಾರ್ಗಗಳಲ್ಲಿ ವ್ಯಕ್ತಪಡಿಸುವುದು ಎಂದು ನನಗೀಗ ಅರಿವಾಗಿದೆ. ಈ ಸದ್ಗ್ರಂಥಗಳೇ ಸೆರೆಮನೆಯಲ್ಲಿ ಈಗ ನನ್ನ ಪವಿತ್ರ ಸಂಗಾತಿಗಳಾಗಿ, ನನಗೆ ವಿವಿಧ ದೃಷ್ಟಿಕೋನಗಳಲ್ಲಿ ಮಾರ್ಗದರ್ಶನ ನೀಡುತ್ತಿವೆ.

ಸೆರೆಮನೆಯು ನನಗೆ ಅಧಿಕವಾದ ಕೃಪೆಯನ್ನು ದಯಪಾಲಿಸಿದೆ ಎಂದೇನೂ ಒತ್ತಿ ಹೇಳಲು ನನಗೆ ಸಾಧ್ಯವಾಗುತ್ತಿಲ್ಲ. ಆದರೆ ಎಲ್ಲಕ್ಕಿಂತ ಮಿಗಿಲಾಗಿ ಅದು ದೇವರೆಡೆಗಿನ ದಾರಿಯನ್ನು ಕಂಡುಕೊಳ್ಳಲು ನನ್ನನ್ನು ಪ್ರೇರೇಪಿಸಿತು. ನಮ್ಮ ಅಸ್ತಿತ್ವದ ಮೂಲ ಸತ್ವವೇ ಅವ್ಯಾಜ ಪ್ರೇಮವಾಗಿದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು, ನಮ್ಮಲ್ಲಿರುವುದನ್ನು ಇತರರ ಒಳಿತಿಗಾಗಿ ನೀಡುವುದು ಹಾಗೂ ಎಲ್ಲರ ಒಳಿತಿಗಾಗಿ ತ್ಯಾಗಮಾಡಲು ಪ್ರಯತ್ನಿಸುವುದೇ ಪರಮಾತ್ಮನನ್ನು ಕಂಡುಕೊಳ್ಳಲು ಇರುವ ದಾರಿಯಾಗಿದೆ. ಈ ಜ್ಞಾನವೇ ನಿಜವಾದ ಶಾಶ್ವತ ಆನಂದವನ್ನು ಕಂಡುಕೊಳ್ಳಲು ಇರುವ ಕೀಲಿಕೈಯಾಗಿದೆ ಎಂಬುದನ್ನು ನಾನು ನಂಬುತ್ತೇನೆ. ಇದು ನಮ್ಮನ್ನು ಮುಕ್ತಿಯೆಡೆಗೆ ಮತ್ತು ಪರಮಸತ್ಯದೆಡೆಗೆ ಕೊಂಡೊಯ್ಯುತ್ತದೆ. ಇದೇ ಸೆರೆಮನೆಯು ನನಗೆ ನೀಡಿದ ವರದಾನ.

**ಪ್ರಿಯ ಓದುಗರೇ, ದಯವಿಟ್ಟು ಗಮನಿಸಿ**

**ವಿವೇಕಪ್ರಭ ಪತ್ರಿಕೆಯ ಚಂದಾವಿವರ, ಪತ್ರಿಕೆಯು ಸಕಾಲದಲ್ಲಿ ಬರದಿದ್ದರೆ ವಿಚಾರಣೆ – ಮುಂತಾದವುಗಳ ಬಗ್ಗೆ ನೀವು ಈ ಕೆಳಗಿನ ಮೊಬೈಲ್ ದೂರವಾಣಿ ಸಂಖ್ಯೆಗೆ ನೇರವಾಗಿ ಕರೆಮಾಡಬಹುದು:**

**9481533505**

**(ಶ್ರೀ ಕೆ. ಪಿ. ವೇಣುಗೋಪಾಲ್)**

**(ಬೆಳಗ್ಗೆ 10.30 ರಿಂದ ಸಂಜೆ 5.30 ರವರೆಗೆ ಮಾತ್ರ, ಭಾನುವಾರ ಮತ್ತು ರಜಾದಿನಗಳನ್ನು ಹೊರತುಪಡಿಸಿ.)**